O.S. No. 34/2020
CW- 2

**ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | | |
|---|---|---|
| ಹೆಸರು | : | ನಾಗಭೂಷಣ |
| ತಂದೆ | : | ಕೃಷ್ಣ ಬಿ ನಾಯ್ಕ |
| ವಯಸ್ಸು | : | *29* ವರ್ಷ |
| ಉದ್ಯೋಗ | : | ಸಹಾಯಕ ವ್ಯವಸ್ಥಾಪಕರು, ಇಂಡಿಯನ್ ಬ್ಯಾಂಕ್ |
| ***ವಿಳಾಸ*** | : | *ರಾಯಚೂರು ಶಾಖೆ, ರಾಯಚೂರು* |

***ಮುಖ್ಯ ವಿಚಾರಣೆಃ***

ನಾನು ಇಂಡಿಯನ್ ಬ್ಯಾಂಕ್ ರಾಯಚೂರು ಶಾಖೆಯಲ್ಲಿ ಈಗ್ಗೆ ಒಂದು ತಿಂಗಳಿನಿಂದ ಸಹಾಯಕ ವ್ಯವಸ್ಥಾಪಕ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಅಲಹಾಬಾದ್ ಬ್ಯಾಂಕ್ ನಮ್ಮ ಬ್ಯಾಂಕ್ ನೊಂದಿಗೆ ವಿಲೀನವಾಗಿದೆ. ಮೊಹಮ್ಮದ್ ಓಮರ್ ಫರೂಕ್, ಖಾತೆ ಸಂ. 50005649481 ನಮ್ಮ ಬ್ಯಾಂಕಿನಲ್ಲಿ ಗ್ರಾಹಕರು, ಮೊದಲು ಅವರು ಅಲಹಾಬಾದ್ ಬ್ಯಾಂಕಿನ ಗ್ರಾಹಕರಾಗಿದ್ದರು. ಸದರಿ ಗ್ರಾಹಕರ ಖಾತಾ ವಹಿಯ ನಕಲನ್ನು ದೃಢೀಕರಿಸಿ ಸಲ್ಲಿಸಿದ್ದೇನೆ.

ಸದರಿ ಖಾತಾವಹಿಯ ದೃಢೀಕೃತ ಪ್ರತಿಯನ್ನು ನಿಸಿ-**4** ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಶ್ರೀ ಸಿ ಕೆ ಆರ್ ವಕೀಲರಿಂದ

ಸಾಕ್ಷಿಗೆ ನಿಸಿ-1 ನ್ನು ತೋರಿಸಿ ಇದು ನಮ್ಮ ಬ್ಯಾಂಕಿನ ಚೆಕ್ ಹೌದಾ ಎಂದರೆ ಸರಿ. ಸದರಿ ಚೆಕ್ ನ್ನು ನಮ್ಮ ಗ್ರಾಹಕರಾದ ಮೊಹಮ್ಮದ ಉಮರ್ ಫರುಕ್ ರವರದ್ದು. ಸದರಿ ಚೆಕ್ ನ್ನು Md Furuk ಹೆಸರಿನವರಿಗೆ ರೂ.2,53,000/-ಗಳಿಗೆ ದಿ. 12-07-2019 ರಂತೆ

ಕೊಡಲ್ಪಟ್ಟಿದೆ. ಸದರಿ ಚೆಕ್ಕು ಯುನಿಯನ್ ಬ್ಯಾಂಕ್ ರಾಯಚೂರು ಶಾಖೆಯ ಮೂಲಕ ನಮ್ಮ ಬ್ಯಾಂಕಿಗೆ ನಗದೀಕರಣಕ್ಕೆ ಬಂದಿದ್ದು ದಿ. 15-07-2019 ರಂದು ನಮ್ಮ ಗ್ರಾಹಕರ ಖಾತೆಯಿಂದ ಖರ್ಚು(Debit) ಹಾಕಲಾಗಿದೆ. ನಿಪಿ-1 ರಲ್ಲಿ ಚೆಕ್ ಕೊಟ್ಟ ನಮ್ಮ ಗ್ರಾಹಕರ ಸಹಿ ಹಿಂಬದಿಯೂ ಸೇರಿ ಎರಡೂ ಕಡೆ ಇದೆ. ನಿಪಿ-4 ರಲ್ಲಿ ಚೆಕ್ ಸಂ. 529585 ಅಥವಾ 599585 ದಿ.9-5-2019 ರ ಚೆಕ್ಕು ರೂ.2,50,000/- ಗಳಿಗೆ ನಮ್ಮ ಗ್ರಾಹಕರಾದ ಮೊಹಮ್ಮದ ಉಮರ್ ಫರುಕ್ ರವರ ಖಾತೆಯಲ್ಲಿ ಖರ್ಚು(Debit) ಆಗಿಯೇ ಎಂದರೆ ಇಲ್ಲ.

( ಶ್ರೀ ಎಸ್.ಕೆ.ಪಿ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**